# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 17-03-2021 ಪ್ರಶ್ನೆ ಸಂಖ್ಯೆ : 1192 (1432)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 17-03-2021

ಉತ್ತರಿಸುವ ಸಚಿವರು : ವಸತಿ ಸಚಿವರು

ವಿಷಯ : RERA ಕಾಯ್ದೆ ಪಾಲನೆಯಾಗದಿರುವ ಪ್ರಕರಣಗಳ ಬಗ್ಗೆ

(ಅ) ರಾಜ್ಯದಲ್ಲಿ RERA ಕಾಯ್ದೆ ಅನುಷ್ಠಾನವಾದ ನಂತರ ವಾಣಿಜ್ಯ ಮತ್ತು ವಸತಿ ಬಡಾವಣೆಯ ಯೋಜನೆಗಳನ್ನು RERA ಕಾಯ್ದೆಯಡಿ ನೋಂದಾಯಿಸಿದವರ ವಿವರ ನೀಡುವುದು ; (ನಕ್ಷೆ ಮತ್ತು ಯೋಜನೆಯ ದಾಖಲೆ ಪ್ರತಿಗಳೊಂದಿಗೆ ವಿವರ ನೀಡುವುದು)

(ಆ) ಈ ಕಾಯ್ದೆಯಡಿ 500 sq. M ಅಥವಾ 8 ಅಪಾರ್ಟ್‌ಮೆಂಟ್‌ಗಿಂತ ಹೆಚ್ಚಿನ ಪ್ರಮಾಣದ ಕಟ್ಟಡ ನಿರ್ಮಾಣವಾಗುತ್ತಿದ್ದಲ್ಲಿ RERA ಕಾಯ್ದೆಯಡಿ ನೊಂದಾಯಿಸಬೇಕಾಗಿದ್ದು, ಎಷ್ಟು ಪ್ರಕರಣಗಳಲ್ಲಿ ಈ ಕಾಯ್ದೆ ಉಲ್ಲಂಘನೆಯಾಗಿದೆ ; (ದಾಖಲೆಗಳ ಸಮೇತ ವಿವರ ನೀಡುವುದು) ಅವರುಗಳ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ; (ಪ್ರಕರಣವಾರು, ದಾಖಲಾತಿ ಸಹಿತ ಮಾಹಿತಿ ನೀಡುವುದು)

(ಇ) RERA ಕಾಯ್ದೆ ಉಲ್ಲಂಘನೆ ಮಾಡಿರುವವರ ವಿರುದ್ಧ ಕಳೆದ 3 ವರ್ಷಗಳಲ್ಲಿ ಸ್ವೀಕೃತವಾದ ದೂರುಗಳೆಷ್ಟು ಮತ್ತು ಈ ಪೈಕಿ ವಿಲೇವಾರಿಯಾದ ಪ್ರಕರಣಗಳೆಷ್ಟು ; (ದೂರು ಅರ್ಜಿಯೊಂದಿಗೆ ಪ್ರಕರಣವಾರು ವಿವರ ನೀಡುವುದು)

(ಈ) ಈ ಕಾಯ್ದೆಯಡಿ ಪ್ರತಿ 3 ತಿಂಗಳಿಗೊಮ್ಮೆ ನಿರ್ಮಾಣ ಹಂತದಲ್ಲಿರುವ ವಾಣಿಜ್ಯ ಮತ್ತು ವಸತಿ ಬಡಾವಣೆಯ ಯೋಜನೆಗಳ ಪ್ರಗತಿಯನ್ನು ಪ್ರತಿ 3 ತಿಂಗಳಿಗೊಮ್ಮೆ RERA ಪೋರ್ಟಲ್‌ನಲ್ಲಿ ತೋರಿಸಬೇಕಾಗಿದ್ದು, ಈ ನಿಯಮವನ್ನು ಪಾಲಿಸಲಾಗುತ್ತಿದೆಯೇ ; ಯಾವೆಲ್ಲಾ ಸಂಸ್ಥೆಗಳು ಇದನ್ನು ಪಾಲಿಸಿರುವುದಿಲ್ಲ ಹಾಗೂ ಇವರ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ? (ದಾಖಲೆ ಸಹಿತ ವಿವರ ನೀಡುವುದು)